

# ಹೆಣ್ಣು ಮೊಸಳೆಗೆ ಗಂಡು ಬೇಕು!

ಸಾಂಕೇತಿಕ ಚಿತ್ರ

**ಅಸ್ಸಾಂನ ಕಾಜಿರಂಗ ಸಂರಕ್ಷಿತ ಅರಣ್ಯದಲ್ಲಿ ಘರಿಯಾಲ್ ಹೆಣ್ಣು ಮೊಸಳೆ ಕಾಣಿಸಿಕೊಂಡಿದೆ. ಅದಕ್ಕೆ ಗಂಡು ದೊರಕಿಸಿಕೊಡುವ ಮೂಲಕ ಅಪರೂಪದ ಜೀವಪ್ರಭೇದದ ಉಳಿವಿನ ಪ್ರಯತ್ನ ಸಾಗಿದೆ.**

■ ಗುರುರಾಜ ಎಸ್. ದಾವಣಗೆರೆ

ಅಸ್ಸಾಂನ ಕಾಜಿರಂಗ ಎಂಬ ಹೆಸರು ಕಿವಿಗೆ ಬೀಳುತ್ತಲೇ ಅಲ್ಲಿನ ಹುಲಿ, ಒಂಟಿಕೊಂಬಿನ ಘೇಂಡಾಮೃಗಗಳು ಕಣ್ಣ ಮುಂದೆ ಸುಳಿಯುತ್ತವೆ. ಬ್ರಹ್ಮಪುತ್ರ ನದಿಯು ಉಕ್ಕಿ ಹರಿದಾಗ ಪ್ರವಾಹಕ್ಕೆ ಸಿಲುಕಿ ನೆಲೆತಪ್ಪಿ ಪರದಾಡುವ ವನ್ಯಪ್ರಾಣಿಗಳ ಚಿತ್ರಗಳು ಆಗಾಗ ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇರುತ್ತವೆ. ಈಗ ಇವೆಲ್ಲವನ್ನೂ ಮರೆಸುವ ಹಾಗೆ ಒಂಟಿ ಮೊಸಳೆಯೊಂದು ಎಲ್ಲರ ಗಮನಸೆಳೆಯುತ್ತಿದೆ.

ಗಂಗಾ, ಚಂಬಲ್ ಹಾಗೂ ಗಿರ್ವ ನದಿ ಪಾತ್ರಗಳಲ್ಲಿ ಮಾತ್ರ ಕಾಣಿಸುತ್ತಿದ್ದ ಭಾರತದ ಸಿಹಿ ನೀರಿನ ಮೊಸಳೆ ಜಾತಿಗೆ ಸೇರಿದ ಉದ್ದ ಮೂತಿಯ ಘರಿಯಾಲ್ (ಗವಿಯಾಲಿಸ್ ಗ್ಯಾಂಜಟಿಕಸ್) ಮೊಸಳೆಯು ಕಳೆದ ಮೂರು ವರ್ಷಗಳಿಂದ ಕಾಜಿರಂಗ ಸಂರಕ್ಷಿತ ಅರಣ್ಯದಲ್ಲಿ ಹರಿಯುವ ಬ್ರಹ್ಮಪುತ್ರ ನದಿ ಪಾತ್ರದಲ್ಲಿ ಪದೇಪದೇ ಕಾಣಿಸಿಕೊಳ್ಳುತ್ತಿದೆ.

ಅಳಿವಿನಂಚಿಗೆ ಬಂದು ನಿಂತಿರುವ ಭಾರತದ ವನ್ಯಜೀವಿಗಳ ಪೈಕಿ ಘರಿಯಾಲ್ ಮೊಸಳೆಯೂ ಒಂದು. ಇತ್ತೀಚಿನ ಗಣತಿಯೊಂದರ ಪ್ರಕಾರ ಕೇವಲ 260–300 ಘರಿಯಾಲ್ ಮೊಸಳೆಗಳು ನಮ್ಮಲ್ಲಿವೆ. ಸಂರಕ್ಷಣೆಗೆ ಹಲವಾರು ಪ್ರಯತ್ನಗಳು ನಡೆಯುತ್ತಿವೆಯಾದರೂ ಆವಾಸನಾಶ, ಬೇಟೆ ಮತ್ತು ಖಾಸಗಿ ಅಣೆಕಟ್ಟುಗಳ ಅಸಮರ್ಪಕ ಕಾರ್ಯವಿಧಾನಗಳಿಂದ ಮೊಸಳೆಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ.

ಈಗ ಕಾಜಿರಂಗ ಅರಣ್ಯದಲ್ಲಿ ಕಾಣಿಸಿಕೊಂಡಿರುವ ಮೊಸಳೆ ಹೆಣ್ಣಾಗಿದ್ದು, ಸಂಗಾತಿಯ ಹುಡುಕಾಟದಲ್ಲಿದೆ ಎಂಬುದು ತಜ್ಞರ ಅಂಬೋಣ. ಅದು ಅಲ್ಲಿಗೆ ಹೇಗೆ ಬಂದಿರಬಹುದು ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಸಂತತಿ ಅಭಿವೃದ್ಧಿಯ ವಯಸ್ಸು ತಲುಪಿರುವುದರಿಂದ ಅದಕ್ಕೊಂದು ಗಂಡು ಹುಡುಕಾಟ ನಡೆಸುತ್ತಿರುವ ಅರಣ್ಯಪಾಲಕ ಅಧಿಕಾರಿಗಳು ಗಂಗಾ ನದಿ ಪಾತ್ರದಿಂದ ಗಂಡು ಘರಿಯಾಲ್ ಮೊಸಳೆ ತರುವ ಯೋಜನೆ ರೂಪಿಸಿ ಸರ್ಕಾರದ ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಸುಮಾರು 70 ವರ್ಷಗಳ ಹಿಂದೆ ಬ್ರಹ್ಮಪುತ್ರ ನದಿ ಪಾತ್ರದಲ್ಲಿ ಘರಿಯಾಲ್ ಮೊಸಳೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿದ್ದುದಕ್ಕೆ ದಾಖಲೆಗಳಿವೆ. ಕಳೆದ ಶತಮಾನದ ಕೊನೆಯ ವೇಳೆಗೆ ಮೊಸಳೆಗಳು ನದಿಯ ಯಾವ ಭಾಗದಲ್ಲೂ ಕಾಣಿಸಿಕೊಂಡಿರದಿದ್ದರಿಂದ ಅವುಗಳ ಸಂತತಿ ವೃದ್ಧಿಗೆ ಬೇಕಾದ ವಾತಾವರಣ ನದಿಯಲ್ಲಿಲ್ಲ ಎಂದು ಎಲ್ಲರೂ ಸುಮ್ಮನಾಗಿದ್ದರು. 1990ರ ಆಸುಪಾಸಿನಲ್ಲಿ ಘರಿಯಾಲ್ ಮೊಸಳೆಗಳನ್ನು ಕಂಡಿದ್ದಾಗಿ ಕೆಲವು ವರದಿಗಳು ಅರಣ್ಯ ಇಲಾಖೆಯ ಕಡತಗಳಲ್ಲಿವೆ. ಆದರೂ ಅದನ್ನು ಸಮರ್ಥಿಸುವ ಉಪಗ್ರಹ ಚಿತ್ರಗಳಾಗಲಿ, ಕ್ಯಾಮೆರಾದಿಂದ ಕ್ಲಿಕ್ಕಿಸಿದ ಚಿತ್ರಗಳಾಗಲಿ ಲಭ್ಯವಿಲ್ಲ. ಬರೋಬ್ಬರಿ 30 ವರ್ಷಗಳ ನಂತರ 2021ರಲ್ಲಿ ಕಾಜಿರಂಗ ಅರಣ್ಯದ ವಿಶ್ವನಾಥ ವನ್ಯಜೀವಿ ವಲಯದಲ್ಲಿ ಮತ್ತೆ ಕಾಣಿಸಿಕೊಂಡದ್ದು ತಜ್ಞರಿಗೆ ಖುಷಿ ನೀಡಿತ್ತು.

ಅಲ್ಲಿಂದೀಚೆಗೆ ಹಲವು ಬಾರಿ ದರ್ಶನ ನೀಡಿರುವ, ಸುಮಾರು ಎರಡೂವರೆ ಮೀಟರ್ ಉದ್ದವಿರುವ ಈ ಹೆಣ್ಣು ಮೊಸಳೆಯು ವನ್ಯಜೀವಿ ಸಂರಕ್ಷಕರಲ್ಲಿ ಅದರ ಸಂತತಿ ವೃದ್ಧಿಯ ಕಡೆ ಯೋಚಿಸುವಂತೆ ಮಾಡಿದೆ. ಇದೇ ವರ್ಷದ ಜನವರಿ ತಿಂಗಳಲ್ಲಿ ನಡೆದ ಅರಣ್ಯ ಸಮೀಕ್ಷೆ ವೇಳೆ ಘರಿಯಾಲ್ ಮೊಸಳೆಯು ಐದುನೂರು ಮೀಟರ್ ಅಂತರದ ಬೇರೆ ಬೇರೆ ಪ್ರದೇಶಗಳಲ್ಲಿ ಎರಡು ಬಾರಿ ಕಾಣಿಸಿಕೊಂಡದ್ದಕ್ಕೆ ಚಿತ್ರಗಳು ಲಭ್ಯವಾಗಿವೆ.

ಬ್ರಹ್ಮಪುತ್ರ ನದಿ ಪಾತ್ರದಲ್ಲಿ ಆಮೆಗಳ ನಿಗಾವಣೆ ಮಾಡುತ್ತಿರುವ 'ಟರ್ಟಲ್ ಸರ್ವೈವಲ್ ಅಲಯನ್ಸ್ ಫೌಂಡೇಶನ್ ಇಂಡಿಯಾ' (ಟಿಎಸ್‌ಎಫ್‌ಐ) ಸದಸ್ಯರು ಅಸ್ಸಾಂ ಅರಣ್ಯ ಇಲಾಖೆ ಜೊತೆಗೂಡಿ ನದಿಯ 160 ಕಿ.ಮೀ. ಪ್ರದೇಶದಲ್ಲಿ ಅರಣ್ಯದ ಪಶ್ಚಿಮ ಭಾಗದ ಕಮಲಬಾರಿ ಸೇತುವೆಯಿಂದ ಪೂರ್ವದ ಕಮಲಬಾರಿ ಘಾಟ್‌ವರೆಗೂ ಸರೀಸೃಪ ಸಮೀಕ್ಷೆ ನಡೆಸಿ ಒಂಟಿ ಮೊಸಳೆಯು ಕಳೆದ ಮೂರು ವರ್ಷಗಳಿಂದ ನದಿ ದಂಡೆಯ ಮರಳು, ದಿಬ್ಬಗಳ ಮೇಲೆ ವಿಹರಿಸುತ್ತಿರುವುದನ್ನು ದಾಖಲಿಸಿದ್ದಾರೆ.

ಟಿಎಸ್‌ಎಫ್‌ಐನ ನಿರ್ದೇಶಕಿ ಸುಶ್ಮಿತ ಕೌರ್, 'ಮೊಸಳೆಯು ಪ್ರೌಢಾವಸ್ಥೆ ತಲುಪಿದೆ ಮತ್ತು ಅದಕ್ಕೊಂದು ಸಂಗಾತಿಯ ಅವಶ್ಯಕತೆ ಇದೆ' ಎಂದಿದ್ದಾರೆ. ಬ್ರಹ್ಮಪುತ್ರ ನದಿ ಪಾತ್ರಕ್ಕೆ ಘರಿಯಾಲ್ ಮೊಸಳೆಗಳ ಪುನರ್ ಸ್ಥಾಪನೆಯು ಅರಣ್ಯ ಇಲಾಖೆಯ ಆದ್ಯತೆಯೂ ಆಗಿರುವುದರಿಂದ ಯೋಜನೆಗೆ ಶೀಘ್ರ ಚಾಲನೆ ನೀಡಬೇಕು ಎಂದು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ. ಕಾಜಿರಂಗ ರಾಷ್ಟ್ರೀಯ ಉದ್ಯಾನವನದ ನಿರ್ದೇಶಕಿ ಸೋನಾಲಿ ಘೋಷ್ ಕೂಡ 'ಹುಲಿ ಸಂರಕ್ಷಿತ ಅರಣ್ಯವು ಘರಿಯಾಲ್ ಮೊಸಳೆಗಳಿಗೆ ಹೇಳಿ ಮಾಡಿಸಿದಂತಿದೆ, ಅವುಗಳ ಸಂಖ್ಯೆ ಮತ್ತು ಸಂತತಿ ವೃದ್ಧಿಗೆ ಬೇಕಾದ ಎಲ್ಲಾ ಕ್ರಮ ಕೈಗೊಳ್ಳಲು ತಾವು ಸಿದ್ಧ' ಎಂದು ಹೇಳಿರುವುದು ಸಂರಕ್ಷಣಾ ವಲಯದಲ್ಲಿ ಹೊಸ ಉತ್ಸಾಹ ಮೂಡಿಸಿದೆ.

ಸರ್ಕಾರದ ಮಟ್ಟದಲ್ಲಿ ಅನುಮತಿ ಸಿಕ್ಕ ತಕ್ಷಣ ಉತ್ತರ ಪ್ರದೇಶ ರಾಜ್ಯದ ಲಕ್ನೋದಲ್ಲಿರುವ ಕುಕ್ರಲಿ ಮೊಸಳೆ ಸಂತತಿ ಅಭಿವೃದ್ಧಿ ಕೇಂದ್ರದಿಂದ ಗಂಡು ಮೊಸಳೆಗಳನ್ನು ತಂದು ಕಾಜಿರಂಗದಲ್ಲಿ ಹರಿಯುವ ಬ್ರಹ್ಮಪುತ್ರ ನದಿಗೆ ಬಿಡುವ ವಿವರಣಾತ್ಮಕ ಯೋಜನಾ ವರದಿಯು ಸರ್ಕಾರದ ಮೇಜಿನ ಮೇಲಿದೆ. ಅದಕ್ಕೆ ಒಪ್ಪಿಗೆ ದೊರಕಿದಲ್ಲಿ ಕೇವಲ ಗಂಗಾ ನದಿ ಪಾತ್ರದ ನೀರಿಗೆ ಮಾತ್ರ ಸೀಮಿತವಾದ ಅಪರೂಪದ ಜೀವ ವೈವಿಧ್ಯದ ಕೊಂಡಿಯೊಂದು ಬ್ರಹ್ಮಪುತ್ರ ನದಿಯವರೆಗೂ ವ್ಯಾಪಿಸಲಿದೆ.

ಪ್ರತಿಕ್ರಿಯಿಸಿ: feedback@sudha.co.in